ಬಿ. ಮಂಜುನಾಥ ಕಾಮತ್, ಹಾಲಾಡಿ

# ಒಂಟಿಯಾನ



‘ಜಾರುತ್ತಿರುವ ವಯಸ್ಸು ಮತ್ತು ಬದುಕಿನ ಅನಿಶ್ಚಿತತೆ ಅವರನ್ನು ಈ ದಿಢೀರ್ ನಿರ್ಧಾರ ಕೈಗೊಳ್ಳುವಂತೆ ಪ್ರೇರೇಪಿಸಿತೆ? ಬೆಂಗಳೂರಿನ ಆ ತಾಯಿ–ಮಗನಿಗೂ ಇವರಿಗೂ ಏನು ಸಂಬಂಧ?’ ಎನ್ನುವ ಪ್ರಶ್ನೆಗಳು ಅರವತ್ತರ ಆಸುಪಾಸಿನಲ್ಲಿದ್ದ ವಾಸುದೇವರ ಪರಿಚಿತರೆಲ್ಲರಿಗೂ ಕಾಡಲಾರಂಭಿಸಿದ್ದವು. ಆದರೆ ವಾಸುದೇವರಾಯರಿಗೆ ಮಾತ್ರ ತಮ್ಮ ಬದುಕಿನಲ್ಲಿ ಈ ಎಲ್ಲಾ ಅನಿರೀಕ್ಷಿತ ತಿರುವುಗಳು ಹೇಗೆ ಎದುರಾದವು ಎನ್ನುವುದೇ ಯಕ್ಷಪ್ರಶ್ನೆಯಾಗಿತ್ತು.

ಸಹ್ಯಾದ್ರಿ ತಪ್ಪಲಿನ ಪುಟ್ಟ ಹಳ್ಳಿಯಲ್ಲಿ ಏಕಾಂಗಿತನದ ನೆರಳಲ್ಲಿ ಬದುಕು ಸವೆಸುತ್ತಿದ್ದ ಅವರಿಗೆ ಮುಖಾಮುಖಿಯಾದ ಘಟನೆಗಳೆಲ್ಲವೂ ತನ್ನಿಂದ ತಾನೇ ಎನ್ನುವಂತೆ ಘಟಿಸುತ್ತಾ ಹೋಗಿದ್ದವು.

ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಅಧ್ಯಾಪಕ ವೃತ್ತಿಯ ಕನಸು ಕಂಡಿದ್ದರು. ತಂದೆಯ ಅಕಾಲಿಕ ಸಾವಿನಿಂದ ಆ ಕನಸು ಕಮರಿಹೋಗಿತ್ತು. ಹೆತ್ತವರಿಗೆ ಒಬ್ಬನೇ ಮಗನಾದ್ದರಿಂದ ವ್ಯಾಸಂಗ ಅರ್ಧಕ್ಕೇ ನಿಲ್ಲಿಸಿ ಹಳ್ಳಿಗೆ ಮರಳಿ, ಮನೆ, ಆಸ್ತಿ, ತೋಟದ ಉಸ್ತುವಾರಿ ನೋಡಿಕೊಳ್ಳುವುದು ಅವರಿಗೆ ಅನಿವಾರ್ಯವಾಗಿತ್ತು.

ದಟ್ಟ ಕಾಡಿನ ನಡುವೆ ಇರುವ ಈ ಪುಟ್ಟ ಹಳ್ಳಿಕೊಂಪೆಯಲ್ಲಿ ಏಕಾಂಗಿಯಾಗಿಯೇ ತಾರುಣ್ಯ ಕಳೆಯುತ್ತಿರುವ ಮಗನಿಗೆ ಮದುವೆ ಮಾಡಿಸಿ, ಆತನಿಗೊಬ್ಬಳು ಸಂಗಾತಿ ಮತ್ತು ಮನೆಗೆ ಚೈತನ್ಯ ತುಂಬಲು ವಾಸುದೇವರ ತಾಯಿ ಪ್ರಯತ್ನಿಸುತ್ತಲೇ ಇದ್ದರು. ಆದರೆ ಮುಂದಿನ